## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** 2021-22ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶಿರ್ಷಿಕೆ: 2225-03-277-2-37 ಅಬ್ಜೆಕ್ಟೀವ್ ಕೋಡ್-059 (ಇತರೆ ಖರ್ಚುಗಳು) ರಡಿ ಹಾಗೂ ಅದೇ ಲೆಕ್ಕಶಿರ್ಷಿಕೆಯ ಅಬ್ಜೆಕ್ಟೀವ್ ಕೋಡ್-015(ಪೂರಕ ವೆಚ್ಚಗಳು) ರಡಿಯಲ್ಲಿ ಉಳಿತಾಯವಾಗುವ ರೂ.616.00 ಲಕ್ಷಗಳನ್ನು ಲೆಕ್ಕಶಿರ್ಷಿಕೆ: 2225-03-277-2-37 ಅಬ್ಜೆಕ್ಟೀವ್ ಕೋಡ್-117 (ವಿದ್ಯಾರ್ಥಿ ವೇತನ ಮತ್ತು ಪ್ರೋತ್ಸಾಹ) ರಡಿಯಲ್ಲಿ ಪುನರ್ವಿನಿಯೋಗ ಮಾಡಿರುವ ಅನುದಾನವನ್ನು ಬಿಡುಗಡೆಗೊಳಿಸುವ ಕುರಿತು.

**ಓದಲಾಗಿದೆ:-**

1. 2021-22 ಸಾಲಿನ ಆಯವ್ಯಯ ಸವಿವರ ವೆಚ್ಚದ ಅಂದಾಜುಗಳ ಸಂಪುಟ-5.
2. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಪ್ರಸ್ತಾವನೆ ಸಂಖ್ಯೆ:ಹಿಂವಕಇ/ತರಬೇತಿ-1/ಇತರೆ/ಸಿಆರ್-6/2021-22, ದಿನಾಂಕ:01.02.2022.
3. ಆರ್ಥಿಕ ಇಲಾಖೆಯ ಅದೇಶ ಸಂಖ್ಯೆ: FD 554 BRS 2021 ದಿನಾಂಕ:25.02.2022.

******

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮ ಸಂಖ್ಯೆ(1) ರಲ್ಲಿ 2021-22ನೇ ಸಾಲಿನ ಅಯವ್ಯಯದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಅನುದಾನವನ್ನು ಹಂಚಿಕೆ ಮಾಡಿ ಆದೇಶಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರಲ್ಲಿ ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರ ಪ್ರಸ್ತಾವನೆಯಲ್ಲಿ 2021-22ನೇ ಸಾಲಿನಲ್ಲಿ ತರಬೇತಿ, ಅರಿವು ಮತ್ತು ಪ್ರೋತ್ಸಾಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ಕಾರ್ಯಕ್ರಮ ರಾಜ್ಯವಲಯ ಲೆಕ್ಕಶೀರ್ಷಿಕೆ:2225-03-277-2-37 ರಡಿ ವಿವಿಧ ಆಬ್ಜೆಕ್ಟೀವ್ ಕೋಡ್ ರಡಿ ಒಟ್ಟು 2000.00 ಲಕ್ಷಗಳ ಅನುದಾನವನ್ನು ನಿಗಧಿಪಡಿಸಲಾಗಿದೆ. ಸದರಿ ಲೆಕ್ಕಶೀರ್ಷಿಕೆಯ ಆಬ್ಜೆಕ್ಟೀವ್ 015 ರಡಿ ಉಳಿಕೆಯಾಗುವ ರೂ.4.82,70000/- ಮತ್ತುಆಬ್ಜೆಕ್ಟೀವ್ ಕೋಡ್-059 ರಡಿ ಉಳಿಕೆಯಾಗುವ ರೂ,1,32,98,056/- ಗಳನ್ನು ಸೇರಿಸಿ ಒಟ್ಟು ರೂ.6,15,68,056/- ಗಳನ್ನು ಪಿಹೆಚ್‌ಡಿ ನವೀಕರಣ ಮತ್ತು 2021-22 ನೇ ಸಾಲಿನ ಹೊಸ ವಿದ್ಯಾರ್ಥಿಗಳ ಮಾಸಿಕ ವ್ಯಾಸಂಗ ವೇತನ ಪಾವತಿಗಾಗಿ ವಿನಿಯೋಗಿಸಲು ಆಬ್ಜೆಕ್ಟೀವ್ -117 ರಡಿ ಪುನರ್ವಿನಿಯೋಗದ ಮೂಲಕ ಮರು ಹೊಂದಾಣಿಕೆ ಮಾಡುವಂತೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ(3) ರಲ್ಲಿ ಆರ್ಥಿಕ ಇಲಾಖೆಯು 2021-22ನೇ ಸಾಲಿಗೆ ಪ್ರಸ್ತಾವನೆಯಲ್ಲಿ ವಿವರಿಸಲಾಗಿರುವಂತೆ ತರಬೇತಿ, ಅರಿವು ಮತ್ತು ಪ್ರೋತ್ಸಾಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ಲೆಕ್ಕಶಿರ್ಷಿಕೆ: 2225-03-277-2-37 ಅಬ್ಜೆಕ್ಟೀವ್ ಕೋಡ್-059 (ಇತರೆ ಖರ್ಚುಗಳು) ರಡಿಯಲ್ಲಿ ರೂ.133.00 ಲಕ್ಷಗಳು ಹಾಗೂ ಅದೇ ಲೆಕ್ಕಶಿರ್ಷಿಕೆಯ ಅಬ್ಜೆಕ್ಟೀವ್ ಕೋಡ್ -015(ಪೂರಕ ವೆಚ್ಚಗಳು) ರಡಿಯಲ್ಲಿ ರೂ. 483.00 ಲಕ್ಷಗಳು ಹೀಗೆ ಒಟ್ಟು ಉಳಿತಾಯವಾಗುವ ರೂ.616.00 ಲಕ್ಷಗಳನ್ನು ಲೆಕ್ಕಶಿರ್ಷಿಕೆ:2225-03-277-2-37 ಅಬ್ಜೆಕ್ಟೀವ್ ಕೋಡ್-117 (ವಿದ್ಯಾರ್ಥಿವೇತನ ಮತ್ತು ಪ್ರೋತ್ಸಾಹ)ರಡಿ ಪುನರ್ವಿನಿಯೋಗದ ಮೂಲಕ ಒದಗಿಸಲು ಮಂಜೂರಾತಿ ನೀಡಿ ಆದೇಶಿಸಲಾಗಿರುತ್ತದೆ.

04/03/2022

ಈ ಹಿನ್ನೆಲೆಯಲ್ಲಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಬಿಸಿಡಬ್ಲ್ಯೂ 339 ಬಿಎಂಎಸ್ 2021**
**ಬೆಂಗಳೂರು, ದಿನಾಂಕ: 04.03.2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ 2021-22ನೇ ಸಾಲಿನಲ್ಲಿ ಲೆಕ್ಕಶಿರ್ಷಿಕೆ: 2225-03-277-2-37 ಅಬ್ಜೆಕ್ಟೀವ್ ಕೋಡ್-059 (ಇತರೆ ಖರ್ಚುಗಳು) ರಡಿಯಲ್ಲಿ ರೂ. 133.00 ಲಕ್ಷಗಳು ಹಾಗೂ ಅದೇ ಲೆಕ್ಕಶಿರ್ಷಿಕೆಯ ಅಬ್ಜೆಕ್ಟೀವ್ ಕೋಡ್-015(ಪೂರಕ ವೆಚ್ಚಗಳು) ರಡಿಯಲ್ಲಿ ರೂ. 483.00 ಲಕ್ಷಗಳು ಹೀಗೆ ಒಟ್ಟು ಉಳಿತಾಯವಾಗುವ ರೂ. 616.00 ಲಕ್ಷಗಳನ್ನು ಅದೇ ಲೆಕ್ಕ ಶೀರ್ಷಿಕೆಯ ಅಬ್ಜೆಕ್ಟೀವ್ ಕೋಡ್-117(ವಿದ್ಯಾರ್ಥಿವೇತನ ಮತ್ತು ಪ್ರೋತ್ಸಾಹ) ರಡಿ ಪುನರ್ವಿನಿಯೋಗ ಮಾಡಿರುವ ಹಿನ್ನೆಲೆಯಲ್ಲಿ ಸದರಿ ಲೆಕ್ಕಶೀರ್ಷಿಕೆ 2225-03-277-2-37 ಅಬ್ಜೆಕ್ಟೀವ್ ಕೋಡ್-117 ರಲ್ಲಿ ಲಭ್ಯವಿರುವ ರೂ. 616.00 ಲಕ್ಷಗಳನ್ನು ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರಿಗೆ ಬಿಡುಗಡೆ ಮಾಡಿ ಆದೇಶಿಸಿದೆ.

ನಿಯಮಾನುಸಾರ ಪಿಹೆಚ್‌ಡಿ ನವೀಕರಣ ಮತ್ತು 2021-22 ನೇ ಸಾಲಿನ ಹೊಸ ವಿದ್ಯಾರ್ಥಿಗಳ ಮಾಸಿಕ ವ್ಯಾಸಂಗ ವೇತನ ಪಾವತಿ ಮಾಡುವಾಗ ಕಡ್ಡಾಯವಾಗಿ ವಿಧ್ಯಾರ್ಥಿಗಳ ಆಧಾರ ಜೊಡಣೆ ಆಗಿರುವ ಬ್ಯಾಂಕ್ ಖಾತೆಗೆ ಡಿಬಿಟಿ ಮೂಲಕ ನಿಯಮಾನುಸಾರ ಅರ್ಹತೆಯಂತೆ ಜಮೆ ಮಾಡುವುದು.

ಸದರಿ ಅನುದಾನದ ಬಳಕೆ ಮಾಡುವಾಗ ಕೆ.ಟಿ.ಪಿ.ಪಿ. ಕಾಯ್ದೆ ಹಾಗೂ ಅದರ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು. ಬಳಕೆಯ ವಿವರಗಳನ್ನು ಮಾಹಿತಿಗಾಗಿ ಆಯುಕ್ತಾಲಯದ ವೆಬ್‌ಸೈಟ್ ನಲ್ಲಿ ಅಳವಡಿಸುವುದು ಹಾಗೂ ಯಾವ ಉದ್ದೇಶಕ್ಕಾಗಿ ಅನುದಾನ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ಬಳಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: FD 554 BRS 2021 ದಿನಾಂಕ:25.02.2022 ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ,
ಮತ್ತು ಅವರ ಹೆಸರಿನಲ್ಲಿ

Shaheen parveen 04/03/2022

**(ಷಾಹೀನ್ ಪರ್ವೀನ್ .ಕೆ)**
ಸರ್ಕಾರದ ಅಧೀನ ಕಾರ್ಯದರ್ಶಿ-2
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

**ಇವರಿಗೆ:-**

1. ಪ್ರಧಾನ ಮಹಾಲೇಖಪಾಲರು, (ಎ ಮತ್ತು ಇ), ಬೆಂಗಳೂರು.
2. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.

3. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ(ವೆಚ್ಚ-3&9), ವಿಧಾನಸೌಧ.
4. ಖಜನಾಧಿಕಾರಿಗಳು, ರಾಜ್ಯ ಹುಜೂರು ಖಜಾನೆ ಇಲಾಖೆ, ಬೆಂಗಳೂರು.

**ಪ್ರತಿ ಮಾಹಿತಿಗಾಗಿ:-**

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರ ಆಪ್ತ ಕಾರ್ಯದರ್ಶಿಗಳು,ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಅಪರ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರ ಆಪ್ತ ಸಹಾಯಕರು,ವಿಕಾಸಸೌಧ, ಬೆಂಗಳೂರು.
3. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

***********